

### ಪಕ್ಷಿನೋಟ ಚೆನ್ನಾಗಿದೆ

2014 ಸಂಭ್ರಮ– ಸಂಕಟ (ಸುಧಾ, ಜ. 1) ಮುಖಪುಟ ಲೇಖನದಲ್ಲಿ ಬಿ.ಎಂ. ಹನೀಫ್ ಅವರು 2014ರ ಆಗು–ಹೋಗುಗಳ ಬಗ್ಗೆ ಹರಿಸಿರುವ 'ಪಕ್ಷಿನೋಟ' ಚೆನ್ನಾಗಿದೆ. ಬಾಹ್ಯಾಕಾಶ ಕ್ಷೇತ್ರದ ಕೀರ್ತಿ ಪತಾಕೆ ಹಾಗೂ ಸತ್ಯಾರ್ಥಿಯವರಿಗೆ ನೊಬೆಲ್ ಪ್ರಶಸ್ತಿಗಳು ಸಂಭ್ರಮದ್ದಾದರೆ, ಉಳಿದ ಘಟನೆಗಳು ಸಂಕಟ ತಂದವುಗಳೇ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಮುಕುಂದ ಹೆರಕಲ್ಲ, ಕಲಬುರಗಿ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಮನಸ್ಸು ಕರಗುತ್ತದೆ

'ಸುದ್ದಿಯಾದವರು' (ಸುಧಾ ಹೆಗಡೆ) ಬರಹ ಬಹಳ ಸೊಗಸಾಗಿದೆ. ಕಣ್ಮರೆಯಾದ ಖ್ಯಾತ ಮಹನೀಯರ ಅಗಲಿಕೆ ವಿವರ ಓದಿದರೆ ಮನಸ್ಸು ಕರಗುತ್ತದೆ.

–ಟಿ.ಆರ್. ಲಲಿತರಾವ್, ಬೆಂಗಳೂರು

### ಉಪಯುಕ್ತ

'ನೈಸರ್ಗಿಕ ಔಷಧಿ ಬಾರ್ಲಿ' ಡಾ. ಬ್ರಹ್ಮಾನಂದ ನಾಯಕ ಅವರ ಆರೋಗ್ಯ ಲೇಖನ ಉಪಯುಕ್ತವಾಗಿತ್ತು. ಪೌಷ್ಟಿಕಾಂಶಗಳ ಆಗರವಾಗಿರುವ ಬಾರ್ಲಿ ಹಲವು ರೋಗಗಳಿಗೆ ಪ್ರತಿಬಂಧಕ ಶಕ್ತಿ ಹೊಂದಿರುವ ವಿಚಾರ ಲೇಖನದಿಂದ ತಿಳಿದು ಬಂತು.

–ರವೀಂದ್ರನಾಥ. ಶಿ. ಯಡಹಳ್ಳಿ, ಬಾಗಲಕೋಟೆ

### ಸ್ವಾರಸ್ಯಕರ

ಮೂಚಿಯವರ ವಿಚಾರಲಹರಿ ಸ್ವಾರಸ್ಯಕರ ಹಾಗೂ ಅರ್ಥಪೂರ್ಣವಾಗಿದೆ.

–ಶ್ರೀನಾಥ್ ಕೊನೇಟಿ, ಬೆಂಗಳೂರು

### ಮದ್ಯದ ಅಮಲು

'ನಿಮ್ಮೊಡನೆ' ಅಂಕಣದಲ್ಲಿ ರಘುನಾಥ ಚ.ಹ. ಅವರು ಬರೆದಿರುವ 'ಅಮಲಿನ ಕಟಕಟೆಯಲ್ಲಿ ಸಮಾಜ' ಭಾರತೀಯ ಸಂಸ್ಕೃತಿಗೆ ಹಿಡಿದ ಕೈಗನ್ನಡಿ!

–ರಾಜಶೇಖರ ಹಾದಿಮನಿ, ಧಾರವಾಡ

### ಕೊನೆ ಎಂದು?

ಮದ್ಯದ ಅಮಲಿನ ಜೊತೆಯಲ್ಲಿ ಅಧಿಕಾರಿಗಳ, ಜನಪ್ರತಿನಿಧಿಗಳ ಭ್ರಷ್ಟತೆಯ ಅಮಲು ಸೇರಿ ಇಡೀ ಸಮಾಜದ ಸ್ವಾಸ್ಥ್ಯವನ್ನೇ ಹಾಳುಗೆಡವುತ್ತಿದೆ. ಇದಕ್ಕೆಲ್ಲಾ ಕೊನೆ ಎಂದು?

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಕಥೆ ಸೊಗಸಾಗಿದೆ

'ಓ ಏಸುವೇ ನನ್ನನ್ನು ಕ್ಷಮಿಸು' (ಕೆ.ಪಿ. ಸತ್ಯನಾರಾಯಣ) ಮತ್ತು 'ಸಂಜೀವಿನಿ' ಮಿನಿಕಥೆ (ಎಲ್. ಗಿರಿಜಾರಾಜ್) ಎರಡೂ ತುಂಬಾ ಸೊಗಸಾಗಿ ಮೂಡಿಬಂದಿದೆ.

–ವೈ.ಜಿ. ನರಸಿಂಹನ್, ಸ್ಮಿತಾ ಎಂ.ಎಸ್. ಶಿವಮೊಗ್ಗ, ಎಸ್. ವಿಜಯಕುಮಾರಿ, ಸುಂದರ್, ಬೆಂಗಳೂರು, ಪಾರ್ವತಿ, ಬೆಂಗಳೂರು, ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಡಿ. ನಾರಾಯಣಸ್ವಾಮಿ, ಬೆಲಗೂರು

### ಮಾಹಿತಿಪೂರ್ಣ

ಯೇಸುವಿನ ಪವಿತ್ರ ತಾಣದ ಬಗ್ಗೆ ಎನ್.ಆರ್. ದೇವಪ್ರಕಾಶ್ ಅವರ ಪ್ರವಾಸ ಲೇಖನ ಮಾಹಿತಿಪೂರ್ಣವಾಗಿತ್ತು. 2015ನೇ ಹೊಸ ವರ್ಷದ ಕ್ಯಾಲೆಂಡರ್ ತುಂಬಾ ಚೆನ್ನಾಗಿದೆ.

–ವೈ.ಎನ್. ಸುಂದರೇಶನ್, ಮೈಸೂರು, ಎಚ್.ಆನಂದಕುಮಾರ್, ಚಿತ್ರದುರ್ಗ, ಎ.ಕೆ. ಪಟ್ಟಾಭಿ, ಬೆಂಗಳೂರು

### ಶೋಭೆ

ಪ್ರತಿಸ್ಪಂದನದಲ್ಲಿ ರಜನಿ ಸಂದರ್ಶನ (ರಾಗು) ಸರಳತೆಯಿಂದ ಶೋಭಿಸಿತು.

-ಎಸ್.ವಿಜಯಕುಮಾರಿ, ಬೆಂಗಳೂರು

### *ವಿಶೇಷ ಈ 'ನಿಮ್ಮ ಪುಟ'*

*ನಮ್ಮ ಸುತ್ತಲೂ ಇರುವ ಅನೇಕ ವಿಶಿಷ್ಟ ಹಾಗೂ ವಿಶೇಷ ಎನಿಸುವಂತಹ ಅಚ್ಚರಿಯ ವಿಷಯಗಳನ್ನು 'ನಿಮ್ಮ ಪುಟ' ಅಂಕಣ ಅಚ್ಚುಕಟ್ಟಾಗಿ ಓದುಗರಿಗೆ ತೆರೆದಿಡುತ್ತಿದೆ. ಅದಕ್ಕೆಂದೇ ನನ್ನಂತಹ ಅನೇಕ ಓದುಗರು ಪ್ರತೀ ವಾರ 'ಸುಧಾ' ಕೈಗೆತ್ತಿದ ಕೂಡಲೆ ಮೊದಲು 'ನಿಮ್ಮ ಪುಟ' ದತ್ತ ಕಣ್ಣೋಡಿಸುವುದು.*

*-ಬೇಲೂರು ದ.ಶಂ. ಪ್ರಕಾಶ್, ಮೈಸೂರು*

### ಪದಬಂಧ ಅಪೂರ್ಣ

ಪದಬಂಧ ಕ್ರಾಸ್‌ವರ್ಡ್‌ನಲ್ಲಿ 19ನೇ ಕಾಲಂ ಇದೆ. ಎಡದಿಂದ ಬಲಕ್ಕೆ ಕ್ಲೂ ಕೊಡುವ ವಿವರದಲ್ಲಿ 19ನೇ ಅಡ್ಡಸಾಲಿಗೆ ವಿವರವಿಲ್ಲ. ಇದಕ್ಕೆ ಉತ್ತರ ನೀಡಿದ ಜನವರಿ 8 ಸಂಚಿಕೆಯಲ್ಲಿ 'ಗೆಳೆತನ' ಎಂಬ ಉತ್ತರವಿದೆ. ಪದಬಂಧ ಲೇಖಕರು ಇದನ್ನು ಮರೆತರೇ ಎಂಬ ಶಂಕೆ ಕಾಡಿದೆ.

- ರೇಷ್ಮಾ ಎ.ಎಸ್., ನೆ.ಸು. ಆನಂದ್, ಬೆಂಗಳೂರು


